**<u>ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ನ್ಯಾಯಾಲಯ, ಗುಬ್ಬಿ</u>**

**<u>ದಿನಾಂಕ:-24.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು: ವಾದಿಗಳ ಪರ</u>**
**<u>ಶ್ರೀ .ಎಸ್.ಆರ್.ವಕೀಲರಿಂದ:</u>**

ನನ್ನ ತಂದೆ ದೊಡ್ಡಕೆಂಚಯ್ಯ ಎಂದರೆ ಸರಿ. ನಿ.ಡಿ.3 ಮತ್ತು 4 ರಲ್ಲಿರುವ ದೊಡ್ಡಕೆಂಚಯ್ಯ ಬಿನ್ ದೊಡ್ಡ ಕೆಂಚಯ್ಯ ಎಂದರೆ ಒಬ್ಬರು ನನ್ನ ತಾತ ಒಬ್ಬರು ನನ್ನ ತಂದೆ ಎಂದು ನುಡಿಯುತ್ತಾರೆ. ದಾವಾಸ್ವತ್ತು ನನ್ನ ತಂದೆಯ ಸ್ವಯಾರ್ಜಿತ ಸ್ವತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಸಾಕ್ಷಿ ಮುಂದುವರಿದು ಗೋಮಾಳವಾಗಿದ್ದು ಸರ್ಕಾರಕ್ಕೆ ಸೇರಿದ್ದು ನನ್ನ ತಂದೆಗೆ ಮಂಜೂರಾಗಿರುತ್ತದೆ ಎಂದು ನುಡಿಯುತ್ತಾರೆ. ನಮ್ಮ ತಂದೆಗೆ ಮಂಜೂರಾಗಿದ್ದರಿಂದ ಅದು ನನ್ನ ತಂದೆಯ ಸ್ವಯಾರ್ಜಿತ ಸ್ವತ್ತಾಗಿರುತ್ತದೆ ಎಂದರೆ ಸರಿಯಲ್ಲ. ನನ್ನತಂದೆ ಬದುಕಿದ್ದಾಗ ನಿ.ಪಿ.1 ರಂತೆ ವಾದಿ ಶಾಲೆಗೆ ದಾವಾಸ್ವತ್ತನ್ನು ದಾನಪತ್ರದ ಮೂಲಕ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಿ.ಪಿ.1 ರಂತೆ ಸ.ನಂ:78 ರಲ್ಲಿ ಇರುವ 1 ಎಕರೆ ಪೈಕಿ 30 ಗುಂಟೆ ಯನ್ನು ನನ್ನ ತಂದೆಯವರು ದಾನವಾಗಿ ವಾದಿ ಶಾಲೆಗೆ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸ.ನಂ: 78 ರಲ್ಲಿರುವ 30 ಗುಂಟೆಯಲ್ಲಿ ದಾನ ನೀಡಿದ ಮೇಲೆ ಶಾಲೆಯನ್ನು ನಿರ್ಮಿಸಲಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ನಿ.ಪಿ.1 ರ ದಾನಪತ್ರದಂತೆ ಮಾರಶೆಟ್ಟಿಹಳ್ಳಿ ಗ್ರಾಮಪಂಚಾಯಿತಿಯವರು ವಾದಿಯ ಶಾಲೆಗೆ ನಿ.ಪಿ.7 ರಿಂದ 13 ರಂತೆ ಡಿಮಾಂಡ್ ರಿಜಿಸ್ಟರ್ ಗಳನ್ನು ಅಂದರೆ ಖಾತೆಯನ್ನು ಸಹ ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆಯವರು ಮಾಡಿಕೊಟ್ಟಿರುವ ನಿ.ಪಿ.1 ರ ದಾನಪತ್ರವನ್ನು ನಾನು ಎಲ್ಲಿಯೂ ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸರಿ. ಅದೇ ರೀತಿ ಮಾರಶೆಟ್ಟಿಹಳ್ಳಿ ಗ್ರಾಮಪಂಚಾಯಿತಿಯಿಂದ ವಾದಿ ಶಾಲೆಗೆ ಮಾಡಿಕೊಟ್ಟಂತಹ ನಿ.ಪಿ.7 ರಿಂದ 13 ದಾಖಲೆಗಳನ್ನು ಎಲ್ಲಿಯೂ ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸರಿ.

ವಾದಿ ಶಾಲೆಯು ಸರ್ಕಾರದ ಅನುದಾನಕ್ಕೂ ಸಹ ಒಳಪಟ್ಟಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನಮ್ಮ ಜಮೀನಿನಲ್ಲಿಯಾವುದೇ ಶಾಲೆ ಇರುವುದಿಲ್ಲ ಎಂದು ಮತ್ತು ನನ್ನ ತಂದೆ ನಿ.ಪಿ.1 ರಂತೆ ದಾನಪತ್ರವನ್ನು ಮಾಡಿಕೊಟ್ಟಿರುವುದಿಲ್ಲ ಎಂದು ಸುಳ್ಳು ನುಡಿಯುತ್ತಿರುತ್ತೇನೆ ಎಂದರೆ ಸರಿಯಲ್ಲ. ದಾವಾಸ್ವತ್ತನ್ನು ನನ್ನತಂದೆಯವರು ವಾದಿ ಶಾಲೆಗೆ ದಾನಕೊಟ್ಟ ನಂತರವೂ ದಾವಾಸ್ವತ್ತಿನ ಪಹಣಿಯು ನನ್ನ ತಂದೆಯ ಹೆಸರಿನಲ್ಲಿಯೇ ಮುಂದುವರಿದಿದ್ದರಿಂದ ಅದನ್ನು ನಾನು ದುರುಪಯೋಗಪಡಿಸಿಕೊಂಡು ರೆವಿನ್ಯೂ ಅಧಿಕಾರಿಗಳೊಂದಿಗೆ ಶರೀಕಾಗಿ ದಾವಾಸ್ವತ್ತುಗಳಿಗೆ ಸಂಬಂದಿಸಿದಂತೆ ದಾಖಲಾತಿಗಳನ್ನು ಸೃಷ್ಟಿಸಿಕೊಂಡು ವಾದಿ ಶಾಲೆಗೆ ತೊಂದರೆ ನೀಡುತ್ತಿರುತ್ತೇನೆ ಎಂದರೆ ಸರಿಯಲ್ಲ. ನಿ.ಡಿ.9 ಮತ್ತು 10 ರಂತೆ ಎಂ.ಆರ್. ಮತ್ತು ಪಹಣಿಯನ್ನುನಾನು ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಮಾರಶೆಟ್ಟಹಳ್ಳಿ ಮತ್ತು ಸುತ್ತಮುತ್ತ ಹಳ್ಳಿಗಳ ವಿದ್ಯಾರ್ಥಿಗಳು ವಾದಿ ಶಾಲೆಯಲ್ಲಿ ಓದುತ್ತಿರುತ್ತಾರೆ ಎಂದರೆ ಸರಿಯಲ್ಲ. ದಾವಾಸ್ವತ್ತಿನಲ್ಲಿರುವ ವಾದಿ ಶಾಲೆಯು ಅನುದಾನಿತ ಶಾಲೆಯಾಗಿರುವುದರಿಂದ ಸದರಿ ಶಾಲೆಯು ಸರ್ಕಾರಕ್ಕೆ ಸೇರಿದ್ದಾಗಿರುತ್ತದೆ ಎಂದರೆ ಸರಿಯಲ್ಲ. ದಾವಾಸ್ವತ್ತಿನಲ್ಲಿ ವಾದಿ ಶಾಲೆಯು ಇರುತ್ತದೆಯೋ ಇಲ್ಲವೋ ಎಂಬುದನ್ನು ಪರೀಕ್ಷಿಸಲು ನ್ಯಾಯಾಲಯದ ನಿಯೋಗಿಯನ್ನು ನೇಮಕ ಮಾಡಿಕಳುಹಿಸುವುದರಿಂದ ನನಗೆ ಯಾವುದೇ ತೊಂದರೆ ಇರುವುದಿಲ್ಲ. ದಾವಾಸ್ವತ್ತಿನಲ್ಲಿ ಶಾಲೆ ಇರುವುದಿಲ್ಲ ನಾವೇ ಸದರಿ ಸ್ವತ್ತಿನಲ್ಲಿ ಉಳುಮೆ ಮಾಡುತ್ತಿರುತ್ತೇವೆ ಎಂದು ತೋರಿಸಲು ನಿ.ಡಿ.9 ಮತ್ತು 10 ರ ದಾಖಲಾತಿಗಳನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ನಮ್ಮ ಬಳಿ ಇನ್ನೂ ದಾಖಲಾತಿಗಳು ಇವೆ ಎನ್ನುತ್ತಾರೆ.

ನಿ.ಡಿ.5 ರಿಂದ 10 ರ  ದಾಖಲಾತಿಗಳನ್ನು ನನ್ನ ತಂದೆಯವರು ವಾದಿ ಶಾಲೆಗೆ ದಾನ ನೀಡಿದ ನಂತರ ಈ ದಾವೆಗೋಸ್ಕರ ಸೃಷ್ಟಿಸಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಪ್ರಮಾಣಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ  ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಅಧಿಕ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ , ಗುಬ್ಬಿ.**